# CBCS SCHEME

USN | | | | | | | | | | |

17KKM39/49

Question Paper Version : A

**Third/Fourth Semester B.E. Degree Examination, Aug./Sept. 2020**

# ಕನ್ನಡ ಮನಸು

**(COMMON TO ALL BRANCHES)**

Time: 2 hrs.] [Max. Marks: 30

## ಸೂಚನೆಗಳು

1. ಎಲ್ಲ ೩೦ ಪ್ರಶ್ನೆಗಳಿಗೂ ಉತ್ತರಿಸಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ.
2. ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ ಯು.ಎಸ್.ಎನ್ ಸಂಖ್ಯೆ ಹಾಗೂ ಪಶ್ನೆ ಪತ್ರಿಕೆಯ ಶ್ರೇಣಿಯನ್ನು ಅಂದರೆ A, B, C ಅಥವಾ D ಯನ್ನು ತಪ್ಪಿಲ್ಲದಂತೆ ಕಡ್ಡಾಯವಾಗಿ ಗುರುತಿಸುವುದು ಅಭ್ಯರ್ಥಿಯ ಜವಾಬ್ದಾರಿಯಾಗಿರುತ್ತದೆ.
3. ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ ನಿಗದಿಪಡಿಸಿರುವ ಸ್ಥಳದಲ್ಲಿ ಭರ್ತಿಮಾಡದೆ ಹಾಗೆಯೇ ಬಿಟ್ಟಲ್ಲಿ ಅಥವಾ ಭರ್ತಿಮಾಡಿದ ಮಾಹಿತಿಯಲ್ಲಿ ಯಾವುದೇ ವ್ಯತ್ಯಾಸವಿದ್ದಲ್ಲಿ ಅಂತಹ ಉತ್ತರ ಪತ್ರಿಕೆಗಳನ್ನು ರದ್ದು ಪಡಿಸಲಾಗುವುದು.
4. ಕೇವಲ ಒಂದು ಉತ್ತರವನ್ನು ಮಾತ್ರ ಉತ್ತರ ಪತ್ರಿಕೆಯಲ್ಲಿ ಗುರುತಿಸತಕ್ಕದ್ದು. ಒಂದೆ ಪ್ರಶ್ನೆಗೆ ಎರಡು ಉತ್ತರವನ್ನು ಗುರುತಿಸುವುದು ಅಮಾನ್ಯ.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾದ ಓ.ಎಂ.ಆರ್ ಉತ್ತರ ಪತ್ರಿಕೆಯ ಹಾಳೆಯ ಮೇಲೆ ಕಪ್ಪು ಅಥವಾ ನೀಲಿ ಶಾಹಿಯ ಬಾಲ್‌ಪಾಯಿಂಟ್ ಪೆನ್ನಿನಿಂದ ಗುರುತು ಮಾಡಬೇಕು.

---

1. 'ಶ್ರಾವಣ' ಪದ್ಯದಲ್ಲಿ 'ಬೆಟ್ಟ' ತೊಟ್ಟಿರುವುದು -------------- ಅಂಗಿ.

   ಅ) ಹತ್ತಿಯ ಬ) ಕುತನಿಯ ಕ) ರೇಷ್ಮೆಯ ಡ) ಕಲ್ನಾರಿನ.

2. ವಿಶ್ವೇಶ್ವರಯ್ಯನವರನ್ನು ಕುರಿತು ಪ್ರಯಾಣಿಕನೊಬ್ಬ ಮಾಡಿದ ಉದ್ಗಾರ '-----------'.

   ಅ) ಇವೆಲ್ಲ ವಿಶ್ವೇಶ್ವರಯ್ಯ ಬ) ಮಾಹಾನ್ ದಿವಾನರು
   ಕ) ಶ್ರೇಷ್ಠ ಇಂಜಿನಿಯರ್ ಡ) ಅತಿ ದೇವಭಕ್ತ.

3. ಜೀವದ ಹೆದರಿಕೆ ಇರುವವನಿಗೆ ವಾಯು ಸಂಚಾರ ----------- ಒಳ್ಳೆಯದು.

   ಅ) ಅಮೇರಿಕಾದಲ್ಲಿ ಬ) ಸ್ವಪ್ನದಲ್ಲೇ ಕ) ಭಾರತದಲ್ಲೇ ಡ) ಎಲ್ಲ ಕಡೆಯೂ.

4. ಅಣ್ಣಪ್ಪನಿಗೆ ಬಂದಿದ್ದುದು ----------- ಕಾಯಿಲೆ.

   ಅ) ಮಲೇರಿಯಾ ಬ) ಟೈಫಾಯ್ಡ ಕ) ಕ್ಯಾನ್ಸರ್ ಡ) ನ್ಯೂಮೋನಿಯಾ.



SN - SN - SN - 31-08-2020 01:50:01pm

5. ಎಮ್ಮೆ --------- ಸೃಷ್ಟಿಯೆಂದು ಹೇಳುತ್ತಾರೆ.
ಅ) ವಸಿಷ್ಠನ ಬ) ಜಮದಗ್ನಿಯ ಕ) ವಿಶ್ವಾಮಿತ್ರನ ಡ) ದೇವರ.

6. ನಾಪತ್ತೆಯಾದ ಪಂಚಕನ್ಯೆಯರು ಸಿಕ್ಕಿದ್ದು ------------.
ಅ) ರೂಮಿನಲ್ಲಿ ಬ) ಆನೆಹಳ್ಳದಲ್ಲಿ ಕ) ಬಿಡಾರಿನಲ್ಲಿ ಡ) ಕಾಡಿನಲ್ಲಿ.

7. 'ತ್ರಿವೇಣಿ' ಅವರ ಮೂಲ ಹೆಸರು
ಅ) ಸರೋಜಾ ಬ) ಭಾಗೀರಥಿ ಕ) ರೇವತಿ ಡ) ವೈದೇಹಿ.

8. 'ರೊಟ್ಟಿ ಮತ್ತು ಕೋವಿ' ಪದ್ಯದಲ್ಲಿ ಹಸಿದ ಕೈಗಳು ------- ಗಳಂತೆ ಇಳಿದು ಸಿಕ್ಕ ಎಂಜಲಿನೆಲೆಯನ್ನು ಹಿರಿದು ತೆಗೆದವು.
ಅ) ಹಾವು ಬ) ಪಕ್ಷಿ ಕ) ನರಿ ಡ) ಉಡ.

9. ಲಂಕೇಶ ನಿರ್ದೇಶಿಸಿದ ಚಲನಚಿತ್ರ ----------.
ಅ) ದಾಟು ಬ) ಮತದಾನ ಕ) ಗೃಹಭಂಗ ಡ) ಪಲ್ಲವಿ.

10. ಕುದುರೆ ಅಬ್ಬಿಯಲ್ಲಿ 'ನದಿ' ಜಲಪಾತವಾಗಿ ಧುಮ್ಮಿಕ್ಕುತ್ತದೆ.
ಅ) ಕಾವೇರಿ ಬ) ಕೃಷ್ಣಾ ಕ) ಭದ್ರಾ ಡ) ತುಂಗಭದ್ರಾ.

11. ಅಸ್ಪತ್ರೆಗೆ ಬಂದ ಹುಡುಗನ ಹೆಸರು
ಅ) ನೆಹರು ಬ) ವಿನೋಬಾ ಕ) ಬೋಸ್ ಡ) ಗಾಂಧಿ.

12. ಸಿದ್ಧಲಿಂಗಯ್ಯ ಅವರ ಪದ್ಯದಂತೆ, "ಅವರ ತೋಟದ ತೆಂಗಿನಲ್ಲಿ ನಮ್ಮ --------- ಎಳನೀರು".
ಅ) ದುಡಿಮೆಯ ಬ) ಶಕ್ತಿಯ ಕ) ರಕ್ತದ ಡ) ದುಡ್ಡಿನ.

13. 'ಎಲ್ಲ ಹುಡುಗಿಯರ ಕನಸು' ಪದ್ಯದಂತೆ, "----------- ಹೂ ಬಿಡಿಸಿ ತುರುಬಿಗೆ ಮುಡಿಸಿದ".
ಅ) ಮಲ್ಲಿಗೆಯ ಬ) ಜಾಜಿಯ ಕ) ತುಂಬೆಯ ಡ) ಗುಲಾಬಿಯ.



VTU-31-08-2020 01:16:27pm - SN - SN - SN - 31-08-2020 01:50:01pm

14. 'ನೀರು' ಕತೆಯ ಲೇಖಕರು

ಅ) ಲಂಕೇಶ ಬ) ಅಮರೇಶ ಕ) ಬಸವರಾಜ. ಡ) ಸವಿತಾ.

15. 'ಕನ್ನಡದ ಮೊದಲ ಕೃತಿ '-------' ದಲ್ಲಿ ಪರರ ಧರ್ಮ ಮತ್ತು ವಿಚಾರಗಳನ್ನು ಸಹಿಸುವುದೇ ಬಂಗಾರ ಎಂಬ ಮಾತಿದೆ.

ಅ) ರಾಮಾಯನ ದರ್ಶನಂ ಬ) ಆದಿ ಪುರಾಣ

ಕ) ಹಸುರು ಹೊನ್ನು ಡ) ಕವಿರಾಜಮಾರ್ಗ.

16. ಬಿಸಿಲಿಗೆ ಊದಿಟ್ಟ ಒಂದು ಬಲೂನು --------- ಹೆಚ್ಚಾದಾಗ ಒಡೆದು ಹೋಗುತ್ತದೆ.

ಅ) ಶಾಖ ಬ) ತಂಪು ಕ) ಬಿಸಿಲು ಡ) ನೀರಾವಿ.

17. 'ಕೊಣವೇಗೌಡ' ಒಂದು

ಅ) ಜನಪದ ಗೀತೆ ಬ) ಭಾವಗೀತೆ ಕ) ಭಕ್ತಿಗೀತೆ ಡ) ತ್ರಿಪದಿ.

18. ಕರ್ನಾಟಕ ಸಂಸ್ಕೃತಿ

ಅ) ಬಹುರೂಪಿಯಾಗಿದೆ ಬ) ವರ್ಣರಂಜಿತವಾಗಿದೆ

ಕ)ಸಂಘರ್ಷವೂ ಇದೆ ಡ) ಎಲ್ಲವು ಸೇರಿ ಜೀವಂತವಾಗಿದೆ.

19. 'ನೀರು' ಕತೆಯಲ್ಲಿ ಬರುವ 'ಅಸುನಿ' ಎಂದರೆ

ಅ) ಸಾವು ಬ) ಮರಣ ಕ) ಅಶ್ವಿನಿ ನಕ್ಷತ್ರ ಡ) ಹುಟ್ಟು.

20. ಎಲ್ಲ ಹುಡುಗಿಯರ ಕನಸು ಪದ್ಯದ ಹುಡುಗ ಮಿಂಚಿನ ಹುಳುವಲ್ಲೇ -------- ಮಾಡಿದ

ಅ) ಓಲೆಯ ಬ) ಮೂಗುತಿಯ ಕ) ಆಭರಣವ ಡ) ಎಲ್ಲ.

21. "ಮನುಷ್ರು ಸಾಯ್ದೆ ------ ಸತ್ತಾದ. ಸುಮ್ಕಿರು ಮಂತೆ" ಎಂದು ಸಂತೈಸುತ್ತಾ ಕರಿಸಿದ್ದೇಗೌಡ ಹೇಳಿದ.

ಅ) ಕಲ್ಲು ಬ) ಮಣ್ಣು ಕ) ಹಾಸಿಗೆ ಡ) ನೀರು.

22. 'ಹಕ್ಕಿ ಹಾರುತಿದೆ ನೋಡಿದಿರಾ?' ಎಂದು ಪದ್ಯದಲ್ಲಿ ಕೇಳಿದವರು ---------.

ಅ)ಲಂಕೇಶ ಬ) ಬೇಂದ್ರೆ ಕ) ಕುವೆಂಪು ಡ) ಬಸವಣ್ಣ.



VTU-31-08-2020 01:16:27pm - SN - SN - SN - SN
31-08-2020 01:30:01pm - SN - SN - SN - SN

23. ಸು.ರಂ. ಎಕ್ಕುಂಡಿಯವರು ತಮ್ಮ ------- ಗಳಿಂದ ಹೆಸರಾದವರು.
    ಅ) ಕಾದಂಬರಿ ಬ) ಕತೆ ಕ) ಪ್ರಬಂಧ ಡ) ಕಥನಕವಿತೆ

24. ಬಿ.ಜಿ.ಎಲ್ ಸ್ವಾಮಿಯವರ -------- ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ.
    ಅ) ಹಸಿರು ಹೊನ್ನು ಬ) ಸಸ್ಯ ವಿಜ್ಞಾನ
    ಕ) ತಮಿಳು ತಲೆಗಳ ನಡುವೆ ಡ) ಸಸ್ಯಕಾಶಿ.

25. ನಲವತ್ತು ಕೋಟಿ ಜನಕ್ಕೆ ನಿತ್ಯ ಹತ್ತು ಔನ್ಸ ------- ಸಹ ದೊರೆಯುವಷ್ಟು ಒಳ್ಳೆಯ ಹಸುಗಳು ನಮ್ಮ ದೇಶದಲ್ಲಿ ಇಲ್ಲ (ಗೊರೂರು ಅವರು ಹೇಳುವಂತೆ).
    ಅ) ಹಾಲು ಬ) ಗಂಜಲು ಕ) ಮಜ್ಜಿಗೆ ಡ) ತುಪ್ಪ.

26. ಸಾಮಾನ್ಯವಾಗಿ ಮಲೆನಾಡಿನಲ್ಲಿ, ಜನಗಳು ಕಾಯಿಲೆಯಾದರೆ ಮೊದಲು -------- ಹೇಳಿಕೊಳ್ಳುತ್ತಾರೆ.
    ಅ) ದೆವ್ವಕ್ಕೆ ಬ) ವೈದ್ಯರಿಗೆ ಕ) ದೇವರಿಗೆ ಡ) ಶಾಸ್ತ್ರಿಗಳಿಗೆ.

27. 'ಶ್ರಾವಣ ಪದ್ಯದಲ್ಲಿ 'ಜಗದ್ಗುರು' ಎಂದು ಕರೆದಿರುವುದು ----------.
    ಅ) ಕೃಷ್ಣನನ್ನು ಬ) ರಾಮನನ್ನು ಕ) ತುಳಸಿದಾಸರನ್ನು ಡ) ಬೇಂದ್ರೆಯವರನ್ನು

28. ಗಾಂಧೀಜಿ ಹೇಳಿದ್ದು : 'ಭಗವಂತ ಮಾನವರಿಗೆ ಕಾಣಿಸಿಕೊಂಡರೆ, ಮೊದಲು ------- ರೂಪದಲ್ಲಿ ಕಾಣಿಸಿಕೊಳ್ಳಬೇಕು'.
    ಅ) ವಸ್ತ್ರದ ಬ) ಅನ್ನದ ಕ) ನೀರಿನ ಡ) ನಿಸರ್ಗದ.

29. ಮರದ ಪಾತ್ರೆಗೆ ದೋಣಿ ಎಂದು ಹೆಸರು. ಆ ಪಾತ್ರೆ ತೀರ ಚಿಕ್ಕದಾದರೆ ------ ಎಂದೆನಿಸಿಕೊಳ್ಳುತ್ತದೆ.
    ಅ) ಪಾತಿ ಬ) ಓಡ ಕ) ಮಂಜಿ ಡ) ಪಡೆ.

30. ಬೇಂದ್ರೆಯವರಿಗೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಕೃತಿ ----------.
    ಅ) ಶ್ರಾವಣ ಬ) ಗರಿ ಕ) ನಾಕುತಂತಿ ಡ) ನಾದಲೀಲೆ.

* * * * *

VTU 31-08-2020 01:16:27pm - SN - SN - SN - SN - SN
31-08-2020 01:50:01pm - SN - SN - SN - SN - SN